# ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು-577101

OFFICE OF THE DEPUTY COMMISSIONER & DISTRICT MAGISTRATE ,

CHIKMAGALUR DISTRICT, CHIKMAGALUR.

Tel.08262-230401(O) , 230402(R), 231499(ADC), 235262(Rev.Sec.), 231222(Fx.)
email:dcckmlr@gmail.com, deo.cmagalur@gmail


ಸಂಖ್ಯೆ:ಎ೦5:LAQ.CR.13/2017-18 ದಿನಾಂಕ:23.05.2017

## ಪ್ರಕಟಣೆ

ವಿಷಯ: ಸಕಲೇಶಪುರ-ಚಿಕ್ಕಮಗಳೂರು ರೈಲ್ವೆ ಬ್ರಾಡ್ ಗೇಜ್ ಯೋಜನೆಗೆ ಚಿಕ್ಕಮಗಳೂರು ತಾಲ್ಲೂಕು, ಅಂಬಳೆ ಹೋಬಳಿ, ಅಂಬಳೆ, ಮಳಲೂರು, ಹಳುವಳ್ಳಿ, ಹಾದಿಹಳ್ಳಿ, ಗಂಜಲಗೋಡು, ಬಾಣಾವರ ಗ್ರಾಮಗಳಲ್ಲಿ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನದ ಅನುಮೋದಿತ ವರದಿಯನ್ನು ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರದ ಸಂಖ್ಯೆ:ಕಂಇ 104 REH 2016 ದಿ:09.05.2017

****

ಚಿಕ್ಕಮಗಳೂರು- ಸಕಲೇಶಪುರ ರೈಲ್ವೆ ಬ್ರಾಡ್ ಗೇಜ್ ಯೋಜನೆಗೆ ಚಿಕ್ಕಮಗಳೂರು ತಾಲ್ಲೂಕು, ಅಂಬಳೆ ಹೋಬಳಿ, ಅಂಬಳೆ, ಮಳಲೂರು, ಹಳುವಳ್ಳಿ, ಹಾದಿಹಳ್ಳಿ, ಗಂಜಲಗೋಡು, ಬಾಣಾವರ ಒಟ್ಟು 6 ಗ್ರಾಮಗಳಲ್ಲಿ ಅಗತ್ಯವಿರುವ 143-17 ಎಕರೆ ಜಮೀನನ್ನು ಭೂಸ್ವಾಧೀನಪಡಿಸುವುದಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರಂತೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕರ್ನಾಟಕ ನಿಯಮಗಳು 2015ರಡಿ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನ ವರದಿಯು ಉಲ್ಲೇಖದ ಸರ್ಕಾರದ ಪತ್ರದಂತೆ ಅನುಮೋದಿಸಲ್ಪಟ್ಟಿದೆ. ಸದರಿ ಅನುಮೋದಿತ ವರದಿಯ ಮಾಹಿತಿಯನ್ನು ಜಿಲ್ಲಾ ವೆಬ್ ಸೈಟ್ ನಲ್ಲಿ ಸಾರ್ವಜನಿಕ ವೀಕ್ಷಣೆಗೆ ಪ್ರಕಟಿಸಲಾಗಿದೆ. ವಿವರ ಕೆಳಕಂಡಂತಿದೆ.

| ಕ್ರ.ಸಂ | ಭೂಸ್ವಾಧೀನಕ್ಕೆ ಒಳಪಡುವ ಗ್ರಾಮಗಳು | ಭೂಸ್ವಾಧೀನಕ್ಕೆ ಒಳಪಡುವ ಸ.ನಂ | ಭೂಸ್ವಾಧೀನಕ್ಕೆ ಒಳಪಡುವ ಕುಟುಂಬಗಳು | ಭೂಸ್ವಾಧೀನಕ್ಕಾಗಿ ಅಗತ್ಯವಿರುವ ಜಮೀನಿನ ವಿಸ್ತೀರ್ಣ (ಎಕರೆ) |
|---|---|---|---|---|
| 1 | ಅಂಬಳೆ | 29 | 26 | 11.15.04 |
| 2 | ಮಳಲೂರು | 103 | 62 | 38.03.04 |
| 3 | ಹಳುವಳ್ಳಿ | 6 | 5 | 01.00.08 |
| 4 | ಬಾಣಾವರ | 10 | 9 | 07.36.08 |
| 5 | ಹಾದಿಹಳ್ಳಿ | 90 | 55 | 58.33.00 |
| 6 | ಗಂಜಲಗೋಡು | 64 | 40 | 26.09.00 |
| ಒಟ್ಟು | | 302 | 197 | 143.17.08 |

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಪ್ರತಿಯನ್ನು:

1. ಜಿಲ್ಲಾ ವಿಜ್ಞಾನ ಸೂಚನಾಧಿಕಾರಿ (NIC), ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರುರವರಿಗೆ CDಯೊಂದಿಗೆ ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಣೆಗಾಗಿ ಕಳುಹಿಸಿದೆ.
2. ಪೌರ ಆಯುಕ್ತರು, ಚಿಕ್ಕಮಗಳೂರು ಇವರಿಗೆ ಮೇಲಿನ ಪ್ರಕಟಣೆಯನ್ನು ನಿಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಈ ಕಾರ್ಯಾಲಯಕ್ಕೆ ವರದಿ ನೀಡುವುದು.
3. ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು ಕಛೇರಿ, ಚಿಕ್ಕಮಗಳೂರುರವರಿಗೆ ಮೇಲಿನ ಪ್ರಕಟಣೆಯನ್ನು ನಿಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಈ ಕಾರ್ಯಾಲಯಕ್ಕೆ ವರದಿ ಮಾಡುವುದು.
4. ಉಪವಿಭಾಗಾಧಿಕಾರಿಗಳು, ಚಿಕ್ಕಮಗಳೂರುರವರಿಗೆ ಮೇಲಿನ ಪ್ರಕಟಣೆಯನ್ನು ನಿಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಈ ಕಾರ್ಯಾಲಯಕ್ಕೆ ವರದಿ ನೀಡುವುದು.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ, ಅಂಬಳೆ ಮತ್ತು ಮಳಲೂರು ಇವರಿಗೆ ಮೇಲಿನ ಪ್ರಕಟಣೆಯನ್ನು ನಿಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಈ ಕಾರ್ಯಾಲಯಕ್ಕೆ ವರದಿ ನೀಡುವುದು.